ಅರಣ್ಯಾಭಿವೃದ್ಧಿ ಈ ಕೆಳಕಂಡಂತೆ ಇರುತ್ತದೆ.

ಅರಣ್ಯ ಇಲಾಖಾ ವತಿಯಿಂದ	-	2472 ಹೆ.
ಕೆ.ಎಫ್.ಡಿ.ಸಿ. ವತಿಯಿಂದ	-	110 ಹೆ.
ಮೈಸೂರು ಕಾಗದ ಕಾರ್ಖಾನೆ ವತಿಯಿಂದ	-	5125 ಹೆ.
ಸಾಮಾಜಿಕ ಅರಣ್ಯ ವತಿಯಿಂದ	-	4682 ಹೆ.
ಒಟ್ಟು		12389 ಹೆ.

ಅರಣ್ಯ ರಕ್ಷಣೆಯ ಸಲುವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ 17,430 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಮೂರು ವರ್ಷದಲ್ಲಿ 5,890 ಹೆಕ್ಟೇರ್ ಪ್ರದೇಶದಲ್ಲಿ ಬೆತ್ತ, ಬಿದಿರು, ಹಣ್ಣು ಹಂಪಲು ಬಿಡುವ ಸಸಿಗಳು, ರಬ್ಬರ್ ಮತ್ತು ಗೇರು ನೆಡುತೋಪುಗಳನ್ನು 48.700 ಲಕ್ಷ ಸಸಿಗಳನ್ನು ನೆಟ್ಟು, ನಿರ್ಮಿಸಲಾಗಿದೆ. ಇದಲ್ಲದೆ 70.251 ಲಕ್ಷ ಸಸಿಗಳನ್ನು ಇಲಾಖಾ ವತಿಯಿಂದ ಬೆಳೆಸಿ ರೈತರಿಗೆ ಮತ್ತು ಸಂಘಸಂಸ್ಥೆಗಳಿಗೆ ಹಂಚಿಕೆ ಮಾರಾಟ ಮಾಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರಣ್ಯ ರಕ್ಷಣೆಯ ಸಲುವಾಗಿ 6,839 ಪ್ರಕರಣಗಳನ್ನು ಕಳೆದ ಮೂರು ವರ್ಷಗಳಲ್ಲಿ ಪತ್ತೆ ಹಚ್ಚಲಾಗಿದೆ.

2) ಮೂಕಾಂಬಿಕಾ ಅಭಯಾರಣ್ಯದಲ್ಲಿ ಅರಣ್ಯ ಅಭಿವೃದ್ಧಿ ನಾಶವಾಗಿರುವುದಿಲ್ಲ.

3) ಮೂಕಾಂಬಿಕಾ ಅಭಯಾರಣ್ಯದಲ್ಲಿ ಬೆಂಕಿ ನಿಯಂತ್ರಣ, ನೆಮತೋಪು ಪೋಷಣೆ, ನರ್ಸರಿ ನಿರ್ಮಾಣ, ಕೆರೆಗಳ ಹೂಳು ತೆಗೆಯುವುದು, ಜಾನುವಾರು ಕಂದಕಗಳ ನಿರ್ಮಾಣ, ಕಳ್ಳ ಬೇಟೆ ನಿಯಂತ್ರಣ ಕಾರ್ಯಕ್ರಮ, ಪೋಷಣೆ ಮತ್ತು ಗಡಿ ಗುರುತಿಸುವಿಕೆ, ರಸ್ತೆಗಳ ದುರಸ್ತಿ, ಹಳ್ಳಿ ಜನರಿಗೆ ಸೌರಶಕ್ತಿ, ದೀಪ ಮತ್ತು ಒಲೆಗಳನ್ನು ಒದಗಿಸುವುದು, ಭೂಸಾರ ಸಂರಕ್ಷಣೆ ಇವೇ ಮುಂತಾದ ಕಾರ್ಯಕ್ರಮಗಳನ್ನು ಕೈಗೊಂಡಿದ್ದು, 1996-97ನೇ ಸಾಲಿನಲ್ಲಿ ರೂ. 19.55 ಲಕ್ಷಗಳನ್ನು ಮೇಲ್ಕಂಡ ಅಭಿವೃದ್ಧಿ ಕಾರ್ಯಕ್ರಮಗಳ ಸಲುವಾಗಿ ಮೀಸಲಿಡಲಾಗಿದೆ.

ವಿಷಯ:- ಶಿಕ್ಷಣಾಧಿಕಾರಿಗಳ ಭೌಗೋಳಿಕ ವ್ಯಾಪ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 442 (835)

ಶ್ರೀ ಐ.ಎಂ.ಜಯರಾಮಶೆಟ್ಟಿ (ಬೆಂದೂರು):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಭೌಗೋಳಿಕ ವ್ಯಾಪ್ತಿ ತುಂಬಾ ವಿಸ್ತೃತವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಸದರಿ ಅಧಿಕಾರಿಯಿಂದ ಪರಿಣಾಮಕಾರಿ ಆಡಳಿತ ವ್ಯವಸ್ಥೆಯ ಪ್ರವಾಸಕ್ಕೆ ಜೀಪು ಅಗತ್ಯವಿರುವುದು ಸರ್ಕಾರಕ್ಕೆ ಮನವರಿಕೆಯಾಗಿದೆಯೇ?

ಇ) ಹಾಗಿದ್ದಲ್ಲಿ ಸದರಿ ಕಛೇರಿಗೆ ಜೀಪನ್ನು ಒದಗಿಸಲು ಸರ್ಕಾರವು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಆ) ಹೌದು. ಬಂದಿದೆ.

ಆ) ಸರ್ಕಾರಕ್ಕೆ ಮನವರಿಕೆಯಾಗಿದೆ.

ಇ) ರಾಜ್ಯದಲ್ಲಿ 190 ರೇಂಜುಗಳಿದ್ದು, ಎಲ್ಲಾ ರೇಂಜುಗಳಿಗೂ ಜೀಪುಗಳನ್ನು ಹಂತ ಹಂತವಾಗಿ ಒದಗಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಇದುವರೆವಿಗೂ 110 ಮಾತ್ರ ಮಂಜೂರಾಗಿದೆ. ಆಯಾ ರೇಂಜುಗಳ ಅಗತ್ಯತೆ ಹಾಗೂ ಜೀಪುಗಳ ಪೂರೈಕೆ ಆಧಾರದ ಮೇಲೆ ರೇಂಜುಗಳಿಗೆ ಮಂಜೂರಾತಿ ನೀಡಲಾಗುತ್ತಿದೆ. ಕುಂದಾಪುರ ರೇಂಜಿನ ಅಗತ್ಯತೆಯನ್ನು ಸರ್ಕಾರ ಗಮನದಲ್ಲಿಟ್ಟುಕೊಂಡಿದೆ.

ವಿಷಯ:- ಶಿರಾ ತಾಲ್ಲೂಕು ಕಿಲಾರದಹಳ್ಳಿ ಕೆರೆಗೆ ಅರಣ್ಯ ಪ್ರದೇಶ ಬಿಡುಗಡೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 443 (643)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ತಾಲ್ಲೂಕು ಕಿಲಾರದಹಳ್ಳಿ ಕೆರೆಯ ನಿರ್ಮಾಣಕ್ಕಾಗಿ ಮುಳುಗಡೆಯಾಗಲಿರುವ ಅರಣ್ಯ ಪ್ರದೇಶದ ಬಿಡುಗಡೆಗಾಗಿ ಹಲವಾರು ವರ್ಷಗಳಿಂದ ಅರಣ್ಯ ಇಲಾಖೆಯಲ್ಲಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅರಣ್ಯ ಪಟ್ಟಿಯಿಂದ ಬಿಡುಗಡೆಗೆ ವಿಳಂಬವಾಗಲು ಕಾರಣವೇನು?

ಇ) ಅರಣ್ಯ ಖಾತೆಯಿಂದ ಇನ್ನು ಎಷ್ಟು ದಿನಗಳಲ್ಲಿ ಜಮೀನನ್ನು ಬಿಡುಗಡೆ ಮಾಡಲಾಗುವುದು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) 1994-95ನೇ ಸಾಲಿನಲ್ಲಿ ಅರಣ್ಯ ಜಮೀನು ಬಿಡುಗಡೆ ಕೋರಿ ಪ್ರಸ್ತಾವನೆ ಅರಣ್ಯ ಇಲಾಖೆಗೆ ಬಂದಿರುತ್ತದೆ. ಅರಣ್ಯ (ಸಂರಕ್ಷಣಾ) ಕಾಯ್ದೆ 1980ರಂತೆ ಪ್ರಸ್ತಾವನೆ ಸಿದ್ಧಗೊಳಿಸಲು ಹಾಗೂ ಸಂಬಂಧಿಸಿದ ನೀರಾವರಿ ಇಲಾಖೆಯಿಂದ ಮಾಹಿತಿ ಸಂಗ್ರಹಿಸಲು ವಿಳಂಬವಾಗಿರುವುದರಿಂದ ಅರಣ್ಯ ಜಮೀನು ಬಿಡುಗಡೆಗೆ ವಿಳಂಬವಾಗಿದೆ.